ಸಂಯುಕ್ತ ಕರ್ನಾಟಕ

# ವಿದ್ಯಾರ್ಥಿಗಳೇ ಅಭಿವೃದ್ಧಿಗೆ ಅಡಿಪಾಯ

**ಬೆಂಗಳೂರು:** ವಿದ್ಯಾರ್ಥಿಗಳ ಜೀವನದಲ್ಲಿ ಇದೊಂದು ಅಪೂರ್ವ ಕ್ಷಣ. ನಿಮ್ಮ ವಿದ್ಯಾರ್ಥಿದೆಸೆಯಲ್ಲಿ ಕಲಿತ ವಿಷಯಗಳು ದೇಶದ ಅಭಿವೃದ್ಧಿಗೆ ಅಡಿಪಾಯವನ್ನು ಹಾಕಬೇಕು. ಸಂಶೋಧನಾ ಕ್ಷೇತ್ರದಲ್ಲಿ ಉನ್ನತ ಸಾಧನೆಗಳಿಗೆ ನಾಂದಿ ಹಾಡಬೇಕೆಂದು ಕೇಂದ್ರ ಸಚಿವ ಡಾ.ಮಹೇಂದ್ರನಾಥ್ ಪಾಂಡೆ ತಿಳಿಸಿದರು.

ಜೈನ್ ವಿಶ್ವವಿದ್ಯಾಲಯದ 6 ಘಟಿಕೋತ್ಸವದಲ್ಲಿ ಭಾಗವಹಿಸಿ ಮಾತನಾಡಿದ ಅವರು, ವಿದ್ಯಾರ್ಥಿಗಳು ಭವಿಷ್ಯದಲ್ಲಿ ದಿವ್ಯಲಕ್ಷ್ಯವನ್ನು ಹೊಂದುವುದು ತುಂಬಾ ಮುಖ್ಯ. ಅದರೊಂದಿಗೆ ಭಾರತ ಸಾಹಿತ್ಯ ಕ್ಷೇತ್ರಕ್ಕೆ ಮುಂದಿನ ಪೀಳಿಗೆಯವರಿಂದ ಮತ್ತಷ್ಟು, ಮಗದಷ್ಟು ಕೃಷಿ ಕಾರ್ಯ ನಡೆಯಬೇಕಿದೆ ಎಂದು ಅಭಿಪ್ರಾಯಪಟ್ಟರು.

ಇನ್ನು ಘಟಿಕೋತ್ಸವದಲ್ಲಿ, ಜೈನ್ ವಿಶ್ವವಿದ್ಯಾಲಯದಲ್ಲಿ ವಾಣಿಜ್ಯ, ಮ್ಯಾನೇಜ್ಮೆಂಟ್, ಅರ್ಥಶಾಸ್ತ್ರ, ಜೈವಿಕ ರಾಸಾಯನಶಾಸ್ತ್ರ, ಭೌತಶಾಸ್ತ್ರ, ಮನಃಶಾಸ್ತ್ರ, ಸಂಗೀತ, ನೃತ್ಯ, ಸಮೂಹ ಸಂವಹನ, ಆಂಗ್ಲ, ಕನ್ನಡ ಮತ್ತು ಸಂಸ್ಕೃತ, ವಿಷಯಗಳಲ್ಲಿ ಉತೀರ್ಣರಾದ 2422 ಪದವೀಧರರಿಗೆ ಪದವಿ ಪ್ರದಾನ ಮಾಡಲಾಯಿತು. ಅಲ್ಲದೇ, ಮಧು ಪಲಾಟಿ, ಹೇಮಾವತಿ ಬಿ, ಸುಪ್ರಿಯ ಎಸ್, ರಮ್ಯ ಎಸ್, ಸೇರಿದಂತೆ 69 ಪ್ರತಿಭಾನ್ವಿತರಿಗೆ ಚಿನ್ನದ ಪದಕವನ್ನು ನೀಡಲಾಯಿತು. ಕಾರ್ಯಕ್ರಮದಲ್ಲಿ ಜೈನ್ ವಿಶ್ವವಿದ್ಯಾಲಯದ ಡಾ. ಸಿ.ಜಿ. ಕೃಷ್ಣದಾಸ್ ನಾಯರ್, ಡಾ. ಎನ್. ಸುಂದರರಾಜನ್, ಎನ್.ವಿ.ಎಚ್.ಕೃಷ್ಣನ್, ಡಾ. ಸಂದೀಪ್ ಶಾಸ್ತ್ರಿ ಉಪಸ್ಥಿತರಿದ್ದರು.



**ಜೈನ್ ವಿಶ್ವವಿದ್ಯಾಲಯದ 6 ಘಟಿಕೋತ್ಸವದಲ್ಲಿ ಕೇಂದ್ರ ಸಚಿವ ಡಾ.ಮಹೇಂದ್ರನಾಥ್ ಪಾಂಡೆ ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಿದರು.**